# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1115 (1175)
ಸದಸ್ಯರ ಹೆಸರು : ಶ್ರೀ ಮಂಜುನಾಥ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 18.03.2025
ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ನಗರ ಮತ್ತು ಯೋಜನಾ ಇಲಾಖೆಯ ಕಾರ್ಯವ್ಯಾಪ್ತಿ ಎಷ್ಟು; ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ನಿವೇಶನ ಅಭಿವೃದ್ಧಿ ಮತ್ತು ಕಟ್ಟಡ ನಿಯಂತ್ರಣ ಈ ಇಲಾಖೆಯ ವ್ಯಾಪ್ತಿಗೆ ಬರುತ್ತಿದೆಯೇ; ಈ ಇಲಾಖೆಯ ವ್ಯಾಪ್ತಿಗೆ ಬರದಿರುವ ಪ್ರಕರಣಗಳು ಯಾವುವು; (ನಿಯಮಗಳ ವಿವರ ನೀಡುವುದು) | ಸ್ಥಳೀಯ ಯೋಜನಾ ಪ್ರದೇಶ ರಚನೆಯಾದ ಎಲ್ಲಾ ಪ್ರಾಧಿಕಾರಗಳು ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಂತೆ, ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗದೆ ಇರುವ ಪ್ರದೇಶಗಳು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತವೆ.<br><br>ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17 ರಡಿಯಲ್ಲಿ ಯೋಜನಾ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆಯಬೇಕಾಗಿರುತ್ತದೆ.<br><br>ಸ್ಥಳೀಯ ಯೋಜನಾ ಪ್ರದೇಶದ ಒಳಪಡದ ಪ್ರದೇಶಗಳಿಗೆ ಸಂಬಂಧಿಸಿದಂತೆ, ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಲ್ 36 ಶಾಸನ 2021, ಬೆಂಗಳೂರು, ದಿನಾಂಕ:07-10-2021 ರಂದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಗೆ ತಿದ್ದುಪಡಿಯಾಗಿದ್ದು, ಹೊಸದಾಗಿ ಕಲಂ 4-K ಸೇರ್ಪಡೆಗೊಳಿಸಲಾಗಿದೆ. ತಿದ್ದುಪಡಿ ಕಾಯ್ದೆ ಕಲಂ 4-ಕೆ ಈ ಕೆಳಕಂಡಂತೆ ಇರುತ್ತದೆ.<br><br>4-K Development of land in an area other than the local planning area. (1) Any person intending to carry out development on any land in an area other than the local planning area as notified under section 4-A, shall make an application in writing to the local authority for permission in such form and containing such particulars and with such documents as may be specified in the regulations.<br><br>(2) The local authority shall, before according permission under sub-section (1), shall obtain prior approval of the Director of |

| | | |
|---|---|---|
| | | Town and Country planning or any subordinate officer not below the rank of Assistant Director of Town Planning, authorised by him.<br><br>ಅದರಂತೆ, ಎಲ್ಲಾ ವಿಸ್ತೀರ್ಣದ ವಿನ್ಯಾಸಗಳಿಗೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರಡಿಯಲ್ಲಿ ವಿನ್ಯಾಸಗಳಿಗೆ ಅನುಮೋದನೆ ಪಡೆದು ನೀಡಲಾಗುತ್ತದೆ.<br><br>ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4ಎ ರಂತೆ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾದ ವ್ಯಾಪ್ತಿಯಲ್ಲಿನ ಸ್ಥಳೀಯ ಸಂಸ್ಥೆಗಳಿಂದ ಸ್ವೀಕೃತವಾಗುವ ಕಟ್ಟಡ ಪರವಾನಿಗೆ ಪ್ರಕರಣಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ಪ್ರಾಧಿಕಾರಗಳಿಂದ ನೀಡಲಾಗುತ್ತಿದೆ. ಆದರೆ, ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿನ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಮಿತಿಯಲ್ಲಿ ಕಟ್ಟಡ ಪರವಾನಿಗೆ ನೀಡಿ ಅಧಿಕಾರವು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಬರುವುದರಿಂದ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ನೀಡಲಾಗುವುದಿಲ್ಲ.<br><br>ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ರಾಜ್ಯದ ಎಲ್ಲಾ ಪ್ರದೇಶಕ್ಕೆ ಅನ್ವಯಿಸುವುದರಿಂದ ಎಲ್ಲಾ ಪ್ರದೇಶವು ನಗರ ಮತ್ತು ಗ್ರಾಮಾಂತರ ಯೋಜನ ಇಲಾಖೆಯ ಕಾರ್ಯವ್ಯಾಪ್ತಿಗೆ ಒಳಪಡುತ್ತವೆ. ಅದರಂತೆ, ನಗರ ಮತ್ತು ಗ್ರಾಮಾಂತರ ಯೋಜನ ಇಲಾಖೆಗೆ ಒಳಪಡದ ಯಾವುದೇ ಪ್ರದೇಶ ಇರುವುದಿಲ್ಲ. |
| (ಆ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇಲ್ಲಿಯವರೆಗೆ ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಎಷ್ಟು ಏಕ ಹಾಗೂ ಬಹು ನಿವೇಶನ ಬಡಾವಣೆ ನಕ್ಷೆ ಅನುಮೋದನೆ ನೀಡಲಾಗಿದೆ; ಎಷ್ಟು ಕಡತಗಳನ್ನು ಯಾವ್ಯಾವ ಕಾರಣಗಳಿಗಾಗಿ ತಿರಸ್ಕರಿಸಿದೆ ಮತ್ತು ಹಿಂತಿರುಗಿಸಲಾಗಿದೆ; ಪ್ರಸ್ತಾವಣೆಗಳನ್ನು ತಿರಸ್ಕರಿಸಲು ಮತ್ತು ಹಿಂದಿರುಗಿಸಲು ಉಲ್ಲೇಖಿಸಿದ ನಿಯಮಗಳು ಯಾವುವು; | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇಲ್ಲಿಯವರೆಗೆ ಏಕ ಹಾಗೂ ಬಹು ನಿವೇಶನ ಬಡಾವಣೆ ನಕ್ಷೆ ಅನುಮೋದನೆ ಹಾಗೂ ತಿರಸ್ಕರಿಸಿರುವ ಪ್ರಕರಣಗಳ ಮಾಹಿತಿಯನ್ನು **ಅನುಬಂಧ** ದಲ್ಲಿ ಒದಗಿಸಿದೆ. |
| (ಇ) | ನಗರ ಮತ್ತು ಯೋಜನಾ ಇಲಾಖೆಯ ಈಗಾಗಲೆ ಮನೆ / ಕಟ್ಟಡ ಇರುವ ಮತ್ತು ನಿವೇಶನಗಳ ವಿಭಜನೆಯ ಪ್ರಕರಣಗಳಿಗೆ ನಿವೇಶನ ಬಡಾವಣೆ ನಕ್ಷೆ ಅನುಮೋದನೆಯನ್ನು | ಅಕ್ರಮ ನಿವೇಶನಗಳನ್ನು ಸಕ್ರಮಗೊಳಿಸಲು ಹಾಗೂ ಅನಧಿಕೃತ ಬೆಳವಣಿಗೆಗಳನ್ನು ಸಕ್ರಮಗೊಳಿಸುವ ಸಂಬಂಧ ಸರ್ಕಾರದಿಂದ ಅಧಿಸೂಚನೆ ಸಂಖ್ಯೆ:ನಅಇ 556 ಮೈಅಪ್ರಾ |

| | | |
|---|---|---|
| | ನೀಡದೆ ಕಡತಗಳನ್ನು ಹಿಂತಿರುಗಿಸಲು ಕಾರಣಗಳೇನು; ಇವುಗಳ ಅನುಮೋದನೆ ಪ್ರಾಧಿಕಾರ ಯಾವುದು; | 2013(1), ದಿನಾಂಕ:28-05-2014 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚನೆಗೆ ಮಾನ್ಯ ಘನ ಸರ್ವೋಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುತ್ತದೆ.<br><br>ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ಇರುವ ಅನಧಿಕೃತ ಬಡಾವಣೆಗಳಲ್ಲಿನ ನಿವೇಶನಗಳಿಗೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ನಿವೇಶನ ಅನುಮೋದನೆಯನ್ನು ನೀಡುವುದಿಲ್ಲ.<br><br>ಅನುಮೋದಿತ ಬಡಾವಣೆಯ ನಿವೇಶನದಲ್ಲಿ ಹಾಲಿ ಕಟ್ಟಡ ಇರುವ ಪ್ರಕರಣಗಳಲ್ಲಿ ನಿಯಮಾನುಸಾರ ಕಾಯ್ದಿರಿಸಬೇಕಾದ ನಡುಜಾಗೆಗಳು ಲಭ್ಯವಾಗದಿರುವ ಪ್ರಕರಣಗಳನ್ನು ತಿರಸ್ಕರಿಸಲಾಗುತ್ತಿದೆ. |
| (ಈ) | ನಗರ ಮತ್ತು ಯೋಜನಾ ಇಲಾಖೆಯ ನಿವೇಶನ ಬಡಾವಣೆ ನಕ್ಷೆ ಅನುಮೋದನೆಯನ್ನು ನೀಡಿ ಕಟ್ಟಡ ನಿರ್ಮಾಣಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ (commencement certificate) ನೀಡದಿರಲು ಕಾರಣವೇನು; | ವಿನ್ಯಾಸ ನಕ್ಷೆಗಳಿಗೆ ಅನುಮೋದನೆ ನೀಡುವುದು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಆದ್ಯ ಕರ್ತವ್ಯವಾಗಿರುತ್ತದೆ.<br><br>ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4ಎ ರಂತೆ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾದ ವ್ಯಾಪ್ತಿಯಲ್ಲಿನ ಸ್ಥಳೀಯ ಸಂಸ್ಥೆಗಳಿಂದ ಸ್ವೀಕೃತವಾಗುವ ಕಟ್ಟಡ ಪರವಾನಿಗೆ ಪ್ರಕರಣಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ಪ್ರಾಧಿಕಾರಗಳಿಂದ ನೀಡಲಾಗುತ್ತಿದೆ. ಆದರೆ, ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿನ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಮಿತಿಯಲ್ಲಿ ಕಟ್ಟಡ ಪರವಾನಿಗೆ ನೀಡುವ ಅಧಿಕಾರವು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಬರುವುದರಿಂದ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ನೀಡಲಾಗುವುದಿಲ್ಲ.<br><br>ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿನ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಮಿತಿಯಲ್ಲಿ ಕಟ್ಟಡ ಪರವಾನಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ. |
| (ಉ) | ಬಡಾವಣೆ ನಕ್ಷೆ ಅನುಮೋದನೆ ಕುರಿತು ನಿಯಮಗಳನ್ನು ಅನ್ವಯಿಸುವಾಗ ಕರಾವಳಿ / ಮಲೆನಾಡು ಭಾಗಗಳಲ್ಲಿರುವ ತುಂಡು ಭೂಮಿ ಮತ್ತು ಹರಡಿಕೊಂಡಿರುವ ಜನವಸತಿ | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ರ ಕರಡು ನಿಯಮಾವಳಿಯನ್ನು ಸಲಹೆ/ ಆಕ್ಷೇಪಣೆಗಳನ್ನು ಪ್ರಕಟಿಸಿ, ಕೋರಲಾಗಿದ್ದು, ನಿಗಧಿತ ಅವಧಿಯಲ್ಲಿ |

| | | |
|---|---|---|
| | ಪ್ರದೇಶಗಳಿಗೆ ಆಗುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಸಂಬಂಧಪಟ್ಟ ಇಲಾಖೆಗಳಾದ ಕಂದಾಯ, ಲೋಕೋಪಯೋಗಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಗ್ರಾಮ ಪಂಚಾಯಿತಿ ಇತ್ಯಾದಿಗಳ ನಡುವೆ ಸಮನ್ವಯ ಸಾಧಿಸಲು ಆಯಾಯ ಇಲಾಖೆಗಳ ಗಮನಕ್ಕೆ ತರಲಾಗಿದೆಯೇ; ಈ ಕುರಿತು ಸಮನ್ವೀಕರಿಸದೆ ಸಮಸ್ಯೆಗಳು ಬಗೆಹರಿಸಲು ಸಾಧ್ಯವಿದೆಯೇ? (ವಿವರ ನೀಡುವುದು) | ಸ್ವೀಕೃತವಾಗುವ ಸಲಹೆ / ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ಆದೇಶ ಹೊರಡಿಸಲು ನಿಯಮಾನುಸಾರ ಕ್ರಮವಹಿಸಲಾಗುವುದು. |

ಕಡತ ಸಂಖ್ಯೆ: ನಅಇ 135 ಮೈಅಪ್ರಾ 2025

(**ಬಿ.ಎಸ್.ಸುರೇಶ**)

ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು.

# ಅನುಬಂಧ

2024-25 ನೇ ಸಾಲಿನ ಏಕ ನಿವೇಶನ ಹಾಗೂ ಬಹು ನಿವೇಶನ ವಿನ್ಯಾಸ ಅನುಮೋದನೆ ನೀಡಿದ ಪ್ರಕರಣಗಳ ವರದಿ.

| ಕ್ರಮ ಸಂಖ್ಯೆ | ಕಛೇರಿಗಳು | ಏಕನಿವೇಶನ ವಿನ್ಯಾಸ ಅನುಮೋದನೆ ಪ್ರಕರಣಗಳ ಸಂಖ್ಯೆ | ಬಹು ವಿನ್ಯಾಸ ಅನುಮೋದನೆ ಪ್ರಕರಣಗಳ ಸಂಖ್ಯೆ | ತಿರಸ್ಕರಿಸಿರುವ ಪ್ರಕರಣಗಳ ಸಂಖ್ಯೆ | ಹಿಂಬರಹ ನೀಡಿರುವ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಸಂಖ್ಯೆ | ಒಟ್ಟು ಪ್ರಕರಣಗಳ ಸಂಖ್ಯೆ | ಷರಾ |
|---|---|---|---|---|---|---|---|---|
| 01 | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು | 189 | 01 | 91 | - | - | - | ಭೂ ಪರಿವರ್ತನೆಗೊಂಡು ಅನಧಿಕೃತವಾಗಿ ವಿಭಜಿಸಿದ ಜಮೀನುಗಳಿಗೆ ಮತ್ತು ತುಂಡು ಭೂಮಿ ಭೂಪರಿವರ್ತಿಸಿ, ವಿನ್ಯಾಸ ನಕ್ಷೆ ಅನುಮೋದನೆ ಕೋರಿರುವ ಮತ್ತು ರಸ್ತೆ ಅಗಲೀಕರಣಕ್ಕೆ ಸೂಕ್ತ ಸ್ಥಳಾವಕಾಶ ಲಭ್ಯವಿರದ ಪ್ರಕರಣಗಳನ್ನು ತಿರಸ್ಕರಿಸಲಾಗಿದೆ. |
| 02 | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಉಡುಪಿ | 449 | 03 | 11 | 255 | 12 | 718 | 1. ಅಗತ್ಯ ದಾಖಲೆ ಕೋರಿ ಹಿಂಬರಹ ನೀಡಲಾಗಿದೆ.<br>2. ಭೂ ಪರಿವರ್ತಿತ ಪ್ರದೇಶದಲ್ಲಿ ಅನಧಿಕೃತವಾಗಿ ವಿಭಜಿಸಿದ ಪ್ರಸ್ತಾವನೆಗಳನ್ನು ಹಾಗೂ ಖಾಸಗಿ ರಸ್ತೆ ಸಂಪರ್ಕ ಇಲ್ಲದೆ ಇರುವ ಪ್ರಕರಣಗಳನ್ನು ತಿರಸ್ಕರಿಸಲಾಗಿದೆ. |
| 03 | ಕಾಪು ಯೋಜನಾ ಪ್ರಾಧಿಕಾರ | 281 | - | 38 | 38 | 85 | 442 | 1. ಭೂ ಪರಿವರ್ತನೆಯಾದ ಒಟ್ಟು ವಿಸ್ತೀರ್ಣದ ಜಾಗಕ್ಕೆ ವಿನ್ಯಾಸ ಅನುಮೋದನೆ ಪಡೆಯದೆ ಜಮೀನನ್ನು ಪರಬಾರೆ ಮಾಡಿರುವ ನಿವೇಶನಗಳನ್ನು ತಿರಸ್ಕರಿಸಲಾಗಿದೆ.<br>2. ಕಡತಗಳು ಈಗಾಗಲೇ ಕಟ್ಟಡ ನಿರ್ಮಿಸಿ ಗ್ರಾಮ ಪಂಚಾಯತ್ ನಿಂದ ಮತ್ತು 11 ಬಿ ನೀಡಿರುವ ಪ್ರಕರಣಗಳನ್ನು ವಿನ್ಯಾಸ ಅನುಮೋದನೆ ಅರ್ಜಿಯನ್ನು ತಿರಸ್ಕರಿಸಲಾಗಿದೆ.<br>3. ದಾಖಲೆಗಳನ್ನು ಕೋರಿ ಹಿಂಬರಹ ನೀಡಲಾಗಿದೆ. |

| | | | | | | | | |
|---|---|---|---|---|---|---|---|---|
| 04 | ಭಂಟ್ವಾಳ ಯೋಜನಾ ಪ್ರಾಧಿಕಾರ | 1155 | | 111 | 142 | 163 | 1570 | 1. ಭೂ ಪರಿವರ್ತನೆಯಾದ ಒಟ್ಟು ವಿಸ್ತೀರ್ಣದ ಜಾಗಕ್ಕೆ ವಿನ್ಯಾಸ ಅನುಮೋದನೆ ಪಡೆಯದೆ ಜಮೀನನ್ನು ಪರಬಾರೆ ಮಾಡಿರುವ ನಿವೇಶನಗಳನ್ನು ತಿರಸ್ಕರಿಸಲಾಗಿದೆ.<br>2. ಈಗಾಗಲೇ ಕಟ್ಟಡ ನಿರ್ಮಿಸಿ ಗ್ರಾಮ ಪಂಚಾಯತ್ ನಿಂದ ಮತ್ತು 11 ಬಿ ನೀಡಿರುವ ಪ್ರಕರಣಗಳನ್ನು ವಿನ್ಯಾಸ ಅನುಮೋದನೆ ಅರ್ಜಿಯನ್ನು ತಿರಸ್ಕರಿಸಲಾಗಿದೆ.<br>3. ದಾಖಲೆಗಳನ್ನು ಕೋರಿ ಹಿಂಬರಹ ನೀಡಲಾಗಿದೆ.<br>4. ಶುಲ್ಕ ಪಾವತಿ ಕೋರಿ ಹಿಂಬರಹ ನೀಡಲಾಗಿದೆ. |
| 05 | ಪುತ್ತೂರು ಯೋಜನಾ ಪ್ರಾಧಿಕಾರ | 491 | - | 41 | - | - | 532 | 1. 20 ಪ್ರಕರಣಗಳು ನಿವೇಶನವನ್ನು ಅನಧಿಕೃತವಾಗಿ ವಿಭಜನೆ ಮಾಡಿರುವುದರಿಂದ ತಿರಸ್ಕರಿಸಲಾಗಿದೆ<br>2. 15 ಪ್ರಕರಣಗಳಿಗೆ ರಸ್ತೆ ಮಾರ್ಜಿನ್‌ಗೆ ಒಳಪಟ್ಟಿರುವುದರಿಂದ ತಿರಸ್ಕರಿಸಲಾಗಿದ.<br>3. 06 ಪ್ರಕರಣಗಳಿಗೆ ನಿವೇಶನದಲ್ಲಿ ಕಟ್ಟಡ ಇರುವುದಿರಂದ ತಿರಸ್ಕರಿಸಲಾಗಿದೆ. |
| 06 | ಕುಂದಾಪುರ ಯೋಜನಾ ಪ್ರಾಧಿಕಾರ | 400 | - | 11 | 262 | - | 673 | 3. ಅಗತ್ಯ ದಾಖಲೆ ಕೋರಿ ಹಿಂಬರಹ ನೀಡಲಾಗಿದೆ.<br>4. ಭೂ ಪರಿವರ್ತಿತ ಪ್ರದೇಶದಲ್ಲಿ ಅನಧಿಕೃತವಾಗಿ ವಿಭಜಿಸಿದ ಪ್ರಸ್ತಾವನೆಗಳನ್ನು ಹಾಗೂ ಖಾಸಗಿ ರಸ್ತೆ ಸಂಪರ್ಕ ಇಲ್ಲದೆ ಇರುವ ಪ್ರಕರಣಗಳನ್ನು ತಿರಸ್ಕರಿಸಲಾಗಿದೆ. |